

ಸಂಪೂರ್ಣ ಬೇರೂರಿಕೊಂಡೇ ಇದ್ದರು. ಅದಕ್ಕೆ ಅವರು ತಮ್ಮ ನೆಲೆ ಮತ್ತು ಜಿಲ್ಲೆಯವರೇ ಆದ ಶಿವರಾಮ ಕಾರಂತರನ್ನು ಮಾದರಿಯಾಗಿಟ್ಟುಕೊಂಡಿದ್ದರೆಂದು ತೋರುತ್ತದೆ. 'ತನ್ನ ಸೀಮೆಯನ್ನು ಕಾರಂತರಂತೆ ಅರಿತವರು, ಪ್ರೀತಿಸಿದವರು ಬೇರೆ ಇಲ್ಲ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉದ್ದಗಲ, ಯಾವ ಮೂಲೆಯನ್ನೂ ಬಿಡದೆ ಅಂಗುಲ ಅಂಗುಲ ಸುತ್ತಿ, ಅದರ ನೆಲ, ಜಲ, ಜನ, ಗಿಡಗಂಟಿ, ಮಿಗ, ಹಕ್ಕಿಪಕ್ಕಿಯ ಪ್ರತಿ ವಿವರವನ್ನೂ ಬಲ್ಲವರಾಗಿದ್ದರು ಅವರು' ಎಂದು ಅಚ್ಚರಿ, ಅಭಿಮಾನ ತುಂಬಿದ ದನಿಯಲ್ಲಿ ಹೇಳುತ್ತಿದ್ದರು.

ದೇಶಕಾಲಗಳ ಗಡಿಗಳನ್ನು ಮೀರಿದ ಅಂತರರಾಷ್ಟ್ರೀಯ ಭ್ರಾತೃತ್ವದ ಭಾವದಿಂದಲೂ ಜಾಗತಿಕ ಸಾಹಿತ್ಯ ಮತ್ತು ಚಿಂತನೆಯ ಹಲವು ಅತ್ಯುತ್ತಮ ಲೇಖಕರ ಅಧ್ಯಯನದಿಂದಲೂ ಸಂಸ್ಕಾರಗೊಂಡ ರಾಜಶೇಖರ ಎಂಬ ಆ ಮನಸ್ಸು, ಆ ಜೀವ ತನ್ನ ಸಾಮಾಜಿಕ ಆಕ್ಟಿವಿಸಮ್‌ನಲ್ಲಿ ತೊಡಗಿಕೊಂಡದ್ದು ಬಹುಮುಖ್ಯವಾಗಿ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಸೀಮೆಯಲ್ಲಿಯೇ ಅನ್ನುವುದರ ಹಿಂದೆ ಇರುವುದು ಆ ನೆಲದ ಮೇಲೆ ಅದಕ್ಕಿದ್ದ ಆ ಕರುಳ ನಂಟಿನ ಒಲುಮೆ. ದಿನೇದಿನೇ ಕೆಡುತ್ತಿರುವ ಜಗದ ಆಗಸದಿಂದ ಬಿಸಿಲು, ಬೆಳಕನ್ನೂ, ಗಾಳಿಯಿಂದ ಇಂಗಾಲಾಮ್ಲವನ್ನೂ ಹೀರಿಕೊಳ್ಳುತ್ತ, ತಾನು ಬೇರೂರಿದ್ದ ನೆಲಕ್ಕೆ ಸಾರಜನಕವನ್ನೂ, ತನ್ನೂರು, ತನ್ನ ಜನರಿಗೆ ಆಮ್ಲಜನಕವನ್ನೂ ನೀಡಲು ಇನ್ನಿಲ್ಲದೆ ಹವಣಿಸಿದ ಆರ್ಗ್ಯಾನಿಕ್ ಇಂಟಲೆಕ್ಚುಅಲ್ ಆಗಿದ್ದರು ಅವರು.

ಹಾಗಾಗಿ, ರಾಜಶೇಖರರ ಹೆಚ್ಚಿನ ಬರಹಗಳೆಲ್ಲ ಪ್ರಕಟವಾದದ್ದು ಶೂದ್ರ, ಸಾಕ್ಷಿ, ಸಮುದಾಯ ವಾರ್ತಾಪತ್ರ, ಸಂವಾದ, ರುಜುವಾತು, ದೇಶಕಾಲ, ಅರಿವು–ಬರಹ, ನೀನಾಸಮ್ ಮಾತುಕತೆ (ಮತ್ತು, ಅವುಗಳನ್ನೂ ಈ ಸಾಲಿಗೆ ಸೇರಿಸಬಹುದಾದರೆ, ಲಂಕೇಶ್ ಪತ್ರಿಕೆ ಹಾಗೂ ಅದರ ನಂತರದ ಗೌರಿ ಲಂಕೇಶ್ ಪತ್ರಿಕೆ) ಮುಂತಾದ ಸಾಹಿತ್ಯಿಕ ಮತ್ತು ಸಾಮಾಜಿಕ ಚಿಂತನೆಯ ಕಿರುಪತ್ರಿಕೆಗಳಲ್ಲಿ. ಇವೆಲ್ಲವೂ ಕನ್ನಡ ಸಾಹಿತ್ಯದ ಕಾವುಳ್ಳ ಪತ್ರಿಕೆಗಳು ಅನ್ನುವುದನ್ನು ಗಮನಿಸಬೇಕು. ಅಂಥ ಸಾಹಿತ್ಯ ಲೋಕದ ಜೀವಿಯಾಗಿ ಅವರಿಗೆ ಭಾಷೆ, ನುಡಿಗಟ್ಟಿನ ವಿಷಯದಲ್ಲಿ ತುಂಬ ಸೂಕ್ಷ್ಮಜ್ಞತೆ ಇತ್ತು. ತಿಳಿಯಾದ ವಾಕ್ಯರಚನೆ ಮತ್ತು ಬುರ್ನಾಸು, ಗಿಲೀಟು ಇಲ್ಲದ ಭಾಷಾಪ್ರಯೋಗದ ವಿಷಯದಲ್ಲಿ ಅವರ ನೆಚ್ಚಿನ ಲೇಖಕ ಜಾರ್ಜ್ ಆರ್ವೆಲ್. ಆ ವಿಷಯ ಬಂದಾಗಲೆಲ್ಲ, ಆರ್ವೆಲ್‌ನನ್ನು